

# ಡರ್ಡಲ್ ಡೋರ್ ಎಂಬ ಭೂಸ್ವರ್ಗ

ಕನಸು ಮನಸಿನ ತುಂಬ 'ಡರ್ಡಲ್ ಡೋರ್' ತುಂಬಿಕೊಂಡಿತ್ತು. ಮೂರ್‍ನಾಲ್ಕು ದಿನಗಳಿಂದಲೂ, 'ಆ ಜಾಗ ನೋಡಲು ತುಂಬಾ ಚೆನ್ನಾಗಿದೆ. ಅಲ್ಲಿ ಹಲವು ಹಿಂದಿ ಸಿನಿಮಾಗಳ ಶೂಟಿಂಗ್ ಕೂಡ ಆಗಿದೆ' ಎಂದು ಪದೇ ಪದೇ ಹೇಳಿ ಆಸೆ ಹುಟ್ಟಿಸಿದ್ದ ನಮ್ಮ ಪಾಲಿನ ಆತಿಥೇಯಳಾದ ವಿನುತಾ ಇದ್ದಕ್ಕಿದ್ದಂತೆ – 'ತುಂಬಾ ಕೆಳಗೆ ಇಳಿಯಬೇಕು. ಇಳಿಜಾರಾದ ಪ್ರದೇಶ. ಅಲ್ಲಿಗೆ ಹೋಗುವುದು ಬಹಳ ಅಪಾಯಕಾರಿ' ಎಂದೆಲ್ಲಾ ಹೆದರಿಸುತ್ತಾ ಹಿಂದೇಟು ಹಾಕತೊಡಗಿದಳು.

ನಮ್ಮ ತಲೆಗೆ ಬೇರೇನೂ ನಾಟದೆ 'ತುಂಬಾ ಚೆನ್ನಾಗಿದೆ' ಎಂಬುದಷ್ಟೇ ನಾಟಿಬಿಟ್ಟಿತ್ತು. ಏನಾದರಾಗಲೀ ಹೋಗಿಯೇ ತೀರುವುದು ಎಂದು ನಿರ್ಧರಿಸಿಬಿಟ್ಟೆವು ಮತ್ತು ವಿನುತಾಳಿಗೆ ಹೇಳಿಯೂಬಿಟ್ಟೆವು. 'ಹಾಗಾದರೆ ಸಮೀಪದಲ್ಲೇ ಬೌರ್ನ್‌ಮೌಥ್ ಎಂಬ ಬೀಚ್ ಇದೆ. ಅದನ್ನೂ ನೋಡಿಕೊಂಡು ಬನ್ನಿ' ಎಂದು ಹೇಳಿ ಕ್ಯಾಬ್‌ನ ವ್ಯವಸ್ಥೆ ಮಾಡಿದಳು. ಬೆಳಗಿನ ಜಾವವೇ ಎದ್ದು ಅಂದಿನ ಮಧ್ಯಾಹ್ನದ ಭೋಜನಕ್ಕಾಗಿ ಚಪಾತಿ, ಮೊಸರುಬುತ್ತಿ ತಯಾರಿಸಿದ ಹೆಂಗಸರು ತಾವೂ ಸಿದ್ಧರಾದರು.

ಎಂದಿನಂತೆ ತನ್ನ ಕಪ್ಪು ಬೆಂಜ್ ಕಾರಿನೊಂದಿಗೆ ಆರು ಗಂಟೆಗೇ ಹಾಜರಾಗಿದ್ದ ಡ್ರೈವರ್ ಜಾನಿ ನಮಗೋಸ್ಕರ ಕಾಯುತ್ತಿದ್ದ. ರೊಯ್ಯೆಂದು ಕಪ್ಪು ಟಾರ್ ರಸ್ತೆಯ ಮೇಲೆ ಮುನ್ನುಗ್ಗಿದ ಕಾರು ಇಂಗ್ಲೆಂಡಿನ ಉತ್ತರ ಭಾಗದಲ್ಲಿರುವ ಡರ್ಡಲ್ ಡೋರ್ ಹಾದಿ ಹಿಡಿಯಿತು. ದಾರಿಯಲ್ಲಿ ಸ್ವೀಡನ್‌ನ 'ಎನ್‌ಎಚ್‌ಎಸ್ ಆಸ್ಪತ್ರೆ'ಯನ್ನು ದೂರದಿಂದ ನೋಡಿದೆವು. ದಾರಿ ಮಧ್ಯದಲ್ಲಿ ಸಿಕ್ಕ ಮ್ಯಾಕ್‌ಡೊನಾಲ್ಡ್‌ನಲ್ಲಿ ಒಂದಷ್ಟು ಹೊಟ್ಟೆ ತುಂಬಿಸಿಕೊಂಡ ನಾವು ಡರ್ಡಲ್ ಡೋರ್ ತಲುಪುವಷ್ಟರಲ್ಲಿ ಸೂರ್ಯ ನಡುನೆತ್ತಿಯನ್ನು ದಾಟಿಯಾಗಿತ್ತು.

ಅದಾಗಲೇ ಸಾಲುಸಾಲು ವಾಹನಗಳು ಅಲ್ಲಿ ನಿಂತಿದ್ದವು ಮತ್ತು ಹಲವಾರು ಜನ ಉಸ್‌ಬಸ್ ಎನ್ನುತ್ತಾ ಮೇಲೆ ಹತ್ತಿ ಬರುತ್ತಿದ್ದರು. ಅವರಲ್ಲಿ ಯುವಕ ಯುವತಿಯರೇ ಹೆಚ್ಚಾಗಿ ಕಾಣಿಸುತ್ತಿದ್ದರು. ಕಾಲುನೋವಿನಿಂದ ಬಳಲುತ್ತಿದ್ದ ನಮ್ಮ ಅತ್ತೆಯವರು ತಾನು ಕಾರಿನಲ್ಲೇ ಕುಳಿತಿರುವುದಾಗಿ ಹೇಳಿದರು. ಅತ್ಯುತ್ಸಾಹದಿಂದ ಮಿಕ್ಕ ನಾವೆಲ್ಲರೂ ಕೆಳಗಿಳಿಯತೊಡಗಿದೆವು. ಅದು ನಾವಂದುಕೊಂಡಷ್ಟು ಕಡಿದಾಗಿರದೆ ಆರಾಮವಾಗಿ ಇಳಿಯಬಹುದಾಗಿತ್ತು.

ಸುಮ್ಮನೆ ಅತಿಭಯವನ್ನು ಹುಟ್ಟಿಸಿದ ವಿನುತಾ ಇಂತಹ ಪ್ರಾಕೃತಿಕ ಸೌಂದರ್ಯದಿಂದ ನಮ್ಮನ್ನು ವಂಚಿತರನ್ನಾಗಿಸುತ್ತಿದ್ದಳಲ್ಲ ಎನಿಸಿದ್ದು, ಅರ್ಧದಾರಿ ಕ್ರಮಿಸಿದ ನಂತರ ಸಮುದ್ರದ ನೀಲಜಲರಾಶಿಯನ್ನು ಕಂಡಾಗ. ಎರಡು ಭೂಪ್ರದೇಶದ ನಡುವೆ ಕಂಗೊಳಿಸುತ್ತಿದ್ದ ಸಮುದ್ರದ ಜಲರಾಶಿ ಕಣ್ಣುಗಳಿಗೆ ಹಬ್ಬವನ್ನುಂಟು ಮಾಡುತ್ತಿತ್ತು. ಒಂದಷ್ಟು ಜನ ಅಲ್ಲಿಯೂ ಇಳಿದು ಜಲಕ್ರೀಡೆಯಾಡತೊಡಗಿದ್ದರು. ಸ್ವಲ್ಪ ಹೊತ್ತು ಅಲ್ಲಿ ನಿಂತು ಒಂದಷ್ಟು ಫೋಟೊ ಕ್ಲಿಕ್ಕಿಸಿಕೊಂಡ ನಂತರ ಮತ್ತೆ ಕೆಳಗಿಳಿಯತೊಡಗಿದವು. ಅಲ್ಲಿ ನೆರೆದಿದ್ದ ಜನಜಂಗುಳಿ ಇಳಿಯುವಾಗಲೇ ಕಣ್ಣಿಗೆ ರಾಚುತ್ತಿತ್ತು.

ಪೂರ್ತಿ ಇಳಿದು ಸಮುದ್ರತೀರ ತಲುಪಿದಾಗ ನಾವು ಕಷ್ಟಪಟ್ಟು ಇಳಿದುಬಂದದ್ದು ನಿಜಕ್ಕೂ ಸಾರ್ಥಕವಾಯಿತೆನಿಸಿದ್ದು ಸುಳ್ಳಲ್ಲ. ಅಪಾರ ಜಲರಾಶಿಯನ್ನು ಭೇದಿಸಿದ ಎರಡು ಅತ್ಯುನ್ನತ ಬಂಡೆಗಳು ದ್ವಾರದ ಚೌಕಟ್ಟಿನಂತೆ ಕಾಣುತ್ತಿದ್ದವು. ಆದ್ದರಿಂದಲೇ ಅದಕ್ಕೆ 'ಡರ್ಡಲ್ ಡೋರ್' ಎಂಬ ಹೆಸರು ಬಂದಿರುವುದು.

ತೀರದಗುಂಟ ಇದ್ದ ಪುಟ್ಟ ಪುಟ್ಟ ಕಲ್ಲುಗಳ ರಾಶಿಯ ಮೇಲೆ ಹೆಜ್ಜೆಯಿಡುತ್ತಾ ಮುಂದೆ ಸಾಗಿದೆವು. ಸಮುದ್ರದಲ್ಲಿ ಇಳಿದು ಒಂದಷ್ಟು ಫೋಟೊ ಕ್ಲಿಕ್ಕಿಸಿಕೊಂಡೆವು. ಅಲ್ಲಿ ಸಾಕಷ್ಟು ಭಾರತೀಯರೂ ಕಂಡುಬರುತ್ತಿದ್ದರು. ಅಲ್ಲೊಂದು ಕಡೆ ಕನ್ನಡ ಚಿತ್ರರಂಗದ ಕೋಮಲ್ ಅವರನ್ನು ಹೋಲುತ್ತಿದ್ದ ವ್ಯಕ್ತಿಯೊಬ್ಬರು ಸಮುದ್ರ ನೋಡುತ್ತಾ ಕುಳಿತಿದ್ದರು. ಕೋಮಲ್ ಅವರೇ ಇರಬಹುದೆಂದುಕೊಂಡು ಸಮೀಪಿಸಿ ಮಾತನಾಡಿಸಿದಾಗ ಅವರು ಬೆಂಗಳೂರಿನ ಜಯನಗರವಾಸಿಯಾಗಿದ್ದ ಬೇರೊಬ್ಬ ವ್ಯಕ್ತಿಯೆಂದು ತಿಳಿಯಿತು. ಒಬ್ಬರಂತೆಯೇ ಇನ್ನೊಬ್ಬರು ಇರುತ್ತಾರೆಂದುಕೊಂಡು ಮುಂದೆ ಸಾಗಿದೆವು.

ತೀರದಗುಂಟ ಸ್ವಲ್ಪ ದೂರ ಹೆಜ್ಜೆಹಾಕಿದ ನಾವು ಅಲ್ಲಲ್ಲಿ ನಿಂತು, ಕುಳಿತು ಆನಂದಿಸಿದೆವು. ಹಿಂತಿರುಗುವಾಗ ಸೂರ್ಯನ ಝಳವಿನ್ನೂ ಕಡಿಮೆಯಾಗಿರಲಿಲ್ಲ. ಏದುಸಿರುಬಿಡುತ್ತಾ ಮೇಲೆ ಹತ್ತಿ ಬರುವಷ್ಟರಲ್ಲಿ ಹೊಟ್ಟೆ ತಾಳ ಹಾಕತೊಡಗಿತ್ತು. ಕ್ಯಾಬ್‌ನ ಪಕ್ಕದಲ್ಲಿಯೇ ಬಿದ್ದಿದ್ದ ನೆರಳಿನ ಮೇಲೆ ಕುಳಿತು ಕ್ಷಣಹೊತ್ತು ದಣಿವಾರಿಸಿಕೊಂಡ ನಂತರ ಕಟ್ಟಿಕೊಂಡು ಹೋಗಿದ್ದ ಬುತ್ತಿಯನ್ನು ಚಪ್ಪರಿಸಿಕೊಂಡು ತಿಂದೆವು. ಪ್ರಕೃತಿಯನ್ನು ಕಣ್ತುಂಬಿಕೊಳ್ಳುತ್ತಾ ಬುತ್ತಿ ತಿನ್ನುವುದರ ಮಜಾನೇ ಬೇರೆ.

■ ಡಾ. ಕೆ.ಬಿ. ರಂಗಸ್ವಾಮಿ